# ಸುದ್ದಿಸಂಚಯ

## ರಾಮಕೃಷ್ಣ ಮಿಷನ್ನಿನ ೨೦೦೬-೨೦೦೭ ಇಸವಿಯ ಅಧಿಕೃತ ವರದಿ

ರಾಮಕೃಷ್ಣ ಮಿಷನ್ನಿನ ೯೮ ನೆಯ ವಾರ್ಷಿಕ ಸಾಧಾರಣ ಸಭೆಯು ಬೇಲೂರು ಮಠದಲ್ಲಿ ದಿನಾಂಕ ೧೬.೧೨.೨೦೦೭ ರಂದು, ಮಧ್ಯಾಹ್ನ ೩.೩೦ ಕ್ಕೆ ಜರುಗಿತು.

ಸಭೆಯಲ್ಲಿ ಪಾಲ್ಗೊಂಡಿದ್ದ ಸದಸ್ಯರು ರಾಮಕೃಷ್ಣ ಮಹಾ ಸಂಘದ ಹದಿನಾಲ್ಕನೆಯ ಮಹಾಧ್ಯಕ್ಷರಾಗಿದ್ದ ಪರಮಪೂಜ್ಯ ಶ್ರೀಮತ್ ಸ್ವಾಮಿ ಗಹನಾನಂದಜಿ ಮಹಾರಾಜ್ ಅವರ ಮಹಾ ಸಮಾಧಿಗೆ ಸಂತಾಪ ಸೂಚಿಸಿದರು. ಹಾಗೆಯೇ ಪರಮಪೂಜ್ಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರನ್ನು ಹದಿನೈದನೆಯ ಮಹಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು.

### ಈ ವರ್ಷದ ನೂತನ ಬೆಳವಣಿಗೆಗೆಗಳು:

### ರಾಮಕೃಷ್ಣ ಮಿಷನ್:

ಮಧ್ಯಪ್ರದೇಶದ *ಭೂಪಾಲ್* ನಲ್ಲಿ ನೂತನ ಶಾಖಾ ಕೇಂದ್ರ, ಮತ್ತು ಕರ್ನಾಟಕದ *ಬೆಳಗಾವಿ* ಕೇಂದ್ರದ ನೂತನ ಶಾಖಾಕೇಂದ್ರ (ಸ್ವಾಮಿ ವಿವೇಕಾನಂದರು ನೆಲೆಸಿದ್ದ ಶ್ರೀ ಭಾಟೆ ಅವರ ಮನೆ.)

**೧. ವೈದ್ಯಕೀಯ ಕ್ಷೇತ್ರ :** *ಇಟಾನಗರ* ಕೇಂದ್ರದಲ್ಲಿ ಮೊಬೈಲ್ ಕಣ್ಣು ತಪಾಸಣಾ ಸೌಲಭ್ಯ, *ಜಮ್ಮು* ಆಶ್ರಮದಲ್ಲಿ ನೂತನ ವೈದ್ಯಕೀಯ ಕೇಂದ್ರ, *ಕಾಮಾರಪುಕುರ* ಆಶ್ರಮದಿಂದ ಜರ್ಮನಿಯ ಕುಷ್ಠರೋಗ ಪರಿಹಾರ ಸಂಸ್ಥೆಯ ಸಹಕಾರದೊಡನೆ ರಾಷ್ಟ್ರೀಯ ಹೆಚ್.ಐ.ವಿ./ಏಡ್ಸ್ ನಿಯಂತ್ರಣ ಕಾರ್ಯಕ್ರಮ.

**೨. ಶೈಕ್ಷಣಿಕ ಕ್ಷೇತ್ರ :** ವಿವೇಕಾನಂದ ವಿಶ್ವವಿದ್ಯಾನಿಲಯದ ವತಿಯಿಂದ *ನರೇಂದ್ರಪುರ, ಸ್ವಾಮಿ ವಿವೇಕಾನಂದರ ಜನ್ಮಸ್ಥಾನ* ಮತ್ತು *ರಾಂಚಿ* (ಮೊರಾಬಾದಿ) ಗಳಲ್ಲಿ ಸ್ನಾತಕೋತ್ತರ ತರಗತಿಗಳ ಮತ್ತು ಕಾರ್ಯಕ್ರಮಗಳ ಆರಂಭ; *ಬೇಲೂರು ಮಠದ* ಶಾರದಾ ಪೀಠ ವಿದ್ಯಾಮಂದಿರ ಕಾಲೇಜಿನಲ್ಲಿ ಸಂಸ್ಕೃತ ಮತ್ತು ಗಣಿತ ಶಾಸ್ತ್ರಗಳಲ್ಲಿ ಸ್ನಾತಕೋತ್ತರ ತರಗತಿಗಳ ಮತ್ತು ಕಾರ್ಯಕ್ರಮಗಳ ಆರಂಭ; *ಕೊಯಮತ್ತೂರು* ಕೇಂದ್ರದಲ್ಲಿ ಐ.ಟಿ. ಅಕಾಡೆಮಿ, ಆನ್‌ಲೈನ್ ಶಿಕ್ಷಣ ಮುಂತಾದ ನೂತನ ಕಾರ್ಯಕ್ರಮಗಳು; *ನರೇಂದ್ರಪುರ ಕೇಂದ್ರದ ಲೋಕಶಿಕ್ಷಾ ಪರಿಷದ್* ಮೂಲಕ ಹನ್ನೊಂದು ಪೂರ್ವಪ್ರಾಥಮಿಕ ಶೈಕ್ಷಣಿಕ ಕೇಂದ್ರಗಳು.

**೩. ಗ್ರಾಮಾಭಿವೃದ್ಧಿ ಕ್ಷೇತ್ರ:** *ಇಟಾನಗರ* ಕೇಂದ್ರದಿಂದ ಗ್ರಾಮೀಣ ಶೌಚಾಲಯ ಯೋಜನೆ, ಜಮ್ಮು ಮತ್ತು ಕಾಶ್ಮೀರ ಭೂಕಂಪ ಆರ್ಥಿಕ ಪುನರ್ನಿರ್ಮಾಣ ಯೋಜನೆಯ ಅಂಗವಾಗಿ *ಜಮ್ಮು* ಕೇಂದ್ರದ ಮೂಲಕ ಗಡಿ ಪ್ರದೇಶದಲ್ಲಿ ಟೈಲರಿಂಗ್ ತರಗತಿಗಳು, *ರಾಂಚಿ (ಮೊರಾಬಾದಿ)* ಕೇಂದ್ರದಿಂದ ಹಣ್ಣು ಮತ್ತು ಸಾಂಬಾರ ಪದಾರ್ಥಗಳ ಉತ್ಪಾದನೆ, ಬೀಜೋತ್ಪಾದನೆ, ನೀರಾವರಿಗಾಗಿ ನೈಸರ್ಗಿಕ ಝರಿಗಳ ನೀರಿನ ಉಪಯೋಗ, ಗ್ರಾಮೀಣ ಹೆಣ್ಣು ಮಕ್ಕಳಿಗೆ ಆವಾಸೀ ಸೇತುಬಂಧ ಶೈಕ್ಷಣಿಕ ಕಾರ್ಯಕ್ರಮ ಮುಂತಾದ ಯೋಜನೆಗಳು, ಕೊಲ್ಕತಾದ *ನರೇಂದ್ರಪುರ ಕೇಂದ್ರದ ಲೋಕಶಿಕ್ಷಾ ಪರಿಷದ್* ವತಿಯಿಂದ ಅನೇಕ ಸಾಮಾಜಿಕ ಮತ್ತು ಆರ್ಥಿಕ ಪುನರ್ನಿರ್ಮಾಣ ಯೋಜನೆಗಳು(ಕೌಶಲಾಭಿವೃದ್ಧಿಗಾಗಿ ವೃತ್ತಿ ತರಬೇತಿ, ಜೈವಿಕ ತಂತ್ರಜ್ಞಾನ ಇತ್ಯಾದಿ)

### ರಾಮಕೃಷ್ಣ ಮಠ

ಗುಜರಾತಿನ *ವಡೋದರದಲ್ಲಿ* ನೂತನ ಕೇಂದ್ರ, *ರಾಜಕೋಟ್* ಆಶ್ರಮದ ವತಿಯಿಂದ ಕಛ್ ಜಿಲ್ಲೆಯ ಧನೇಲಿಯಲ್ಲಿ ಹಾಸ್ಟೆಲ್ ಕಟ್ಟಡ ಮತ್ತು ಸಭಾಭವನ ಉದ್ಘಾಟನೆ, ಪಶ್ಚಿಮ ಬಂಗಾಳದ *ಆಂಟ್‌ಪುರ* ಕೇಂದ್ರದಲ್ಲಿ ಔಷಧಾಲಯ ಉದ್ಘಾಟನೆ, ತಮಿಳು ನಾಡಿನ ಮಧುರೈ ಕೇಂದ್ರದಲ್ಲಿ ನೂತನ ಶಾಲಾ ಕಟ್ಟಡಗಳು, ಪಶ್ಚಿಮ ಬಂಗಾಳದ *ಕೂಚ್‌ಬಿಹಾರ್* ಕೇಂದ್ರದಲ್ಲಿ ಸ್ವ-ಉದ್ಯೋಗ ಯೋಜನೆ ಮುಂತಾದವು.

**ಭಾರತದ ಹೊರಗಡೆ :** ಅಮೆರಿಕೆಯ ಫ್ಲೋರಿಡಾದ *ಸೈಂಟ್ ಪೀಟರ್ಸ್ ಬರ್ಗ್‌ನಲ್ಲಿ* ರಾಮಕೃಷ್ಣ ಮಠದ ನೂತನ ಶಾಖಾ ಕೇಂದ್ರ, ದಕ್ಷಿಣ ಆಫ್ರಿಕಾ ದೇಶದ *ಡರ್ಬನ್‌ನಲ್ಲಿ* ರಾಮಕೃಷ್ಣ ಮಿಷನ್ನಿನ ನೂತನ ಶಾಖಾ ಕೇಂದ್ರಗಳ ಸ್ಥಾಪನೆ.

### ಈಗಾಗಲೇ ನಡೆಯುತ್ತಿರುವ ಯೋಜನೆಗಳ ಸ್ವರೂಪ

**೧. ಪರಿಹಾರ ಮತ್ತು ಪುನರ್ನಿರ್ಮಾಣ ಕಾರ್ಯ:** ರಾಮಕೃಷ್ಣ ಮಹಾ ಸಂಘವು ಈ ವರ್ಷ ತನ್ನ ಅನೇಕ ವ್ಯಾಪಕ ಯೋಜನೆಗಳ ಮೂಲಕ ೩.೮೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ೨೦೨೭ ಹಳ್ಳಿಗಳ, ೧.೩೦ ಲಕ್ಷ ಕುಟುಂಬಗಳ ೫.೬೭ ಲಕ್ಷ ಜನರಿಗೆ ಪರಿಹಾರವನ್ನು ಒದಗಿಸಿದೆ.

**೨. ಸಮಾಜಕಲ್ಯಾಣ ಕಾರ್ಯಕ್ರಮ:** ಬಡವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್‌ಗಳು, ವೃದ್ಧ, ನೀರೋಗಿ ಮತ್ತು ಅನಾಥ ಜನರಿಗೆ ಧನ ಸಹಾಯ ಮುಂತಾದವುಗಳಿಗೆ ಈ ವರ್ಷ ಖರ್ಚು ಮಾಡಿದ ವೆಚ್ಚ ೬.೨೫ ಕೋಟಿ ರೂಪಾಯಿಗಳು.

**೩. ವೈದ್ಯಕೀಯ ಸೇವೆ :** ೧೫ ಆಸ್ಪತ್ರೆಗಳು ಮತ್ತು ೧೭೩ ಔಷಧಾಲಯಗಳ ಮೂಲಕ ೮೫.೩೨ ಲಕ್ಷ ಜನರಿಗೆ ಈ ವರ್ಷ ವೈದ್ಯಕೀಯ ಸೇವೆಯನ್ನು ಒದಗಿಸಲಾಗಿದೆ.

**೪. ಶೈಕ್ಷಣಿಕ ಕಾರ್ಯ :** ಶಿಶುವಿಹಾರಗಳಿಂದ ಹಿಡಿದು ಸ್ನಾತಕೋತ್ತರ ತರಗತಿಗಳವರೆಗೆ, ನಮ್ಮ ಶೈಕ್ಷಣಿಕ ಸಂಸ್ಥೆಗಳಲ್ಲಿ ೩.೪೯ ಲಕ್ಷ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಈ ಕಾರ್ಯಕ್ಕೆ ಒಟ್ಟು ೬೧.೫೫ ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಲಾಗಿದೆ.

**೫. ಗ್ರಾಮೀಣ ಮತ್ತು ಬುಡಕಟ್ಟು ಅಭಿವೃದ್ಧಿ ಯೋಜನೆ :** ಅನೇಕ ಯೋಜನೆಗಳ ಮೂಲಕ ೧೮.೬೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಈ ಮೂಲಕ ನಮ್ಮೆಲ್ಲ ಸದಸ್ಯರು ಮತ್ತು ಸ್ನೇಹಿತರಿಗೆ, ನಾವು ಅವರ ಸಹಕಾರ ಮತ್ತು ಸಹಾಯಗಳಿಗಾಗಿ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

**೧೬, ಡಿಸೆಂಬರ್, ೨೦೦೭**

**ಸ್ವಾಮಿ ಪ್ರಭಾನಂದ**
(ಪ್ರಧಾನ ಕಾರ್ಯದರ್ಶಿ)

Managing Editor : *Swami Nityasthananda*

Editor : *Swami Vireshananda*

Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore